ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

**ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01**

ಸಂ: ಸ.ಶಿ.ಅ/ಒಓಎಸ್‌ಸಿ/ಶೈ.ವ/ಸುತ್ತೋಲೆ/2010-11 ದಿನಾಂಕ: 03.06.2010

ಸರ್ವ ಶಿಕ್ಷಣ ಅಭಿಯಾನ
ರವಾನಿಸಿದ ಸಂ: 807
ದಿನಾಂಕ: 7/6/2010
ಸಹಿ:

# ಸುತ್ತೋಲೆ

ವಿಷಯ: ಪರ್ಯಾಯ ಶಿಕ್ಷಣ ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಶೈಕ್ಷಣಿಕ ವಸ್ತುಚಿತ್ರ ಬಗ್ಗೆ ದಾಖಲೆಗಳನ್ನು ನಿರ್ವಹಿಸುವ ಕುರಿತು

**********

ಸರ್ವ ಶಿಕ್ಷಣ ಅಭಿಯಾನದ ಶಾಲೆಯಿಂದ ಹೊರಗುಳಿದ ಮಕ್ಕಳ ಮಧ್ಯವರ್ತನೆಯಡಿಯಲ್ಲಿ ನಡೆಸಲಾಗುತ್ತಿರುವ ವಿವಿಧ ಸೇತುಬಂಧ ಕೇಂದ್ರಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಿ ಅವರ ವಯೋಮಾನಕ್ಕೆ ಅನುಗುಣವಾಗಿ ನಿರ್ದಿಷ್ಟ ತರಗತಿಗಳಲ್ಲಿ ದಾಖಲಿಸುವುದರ ಮೂಲಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ಇಲಾಖಾ ಉದ್ದೇಶವನ್ನು ಸಾಧಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಪರ್ಯಾಯ ಕೇಂದ್ರದಲ್ಲಿರುವ ಪ್ರತಿಯೊಂದು ಮಗುವಿಗೆ ಸಂಬಂಧಿಸಿದಂತೆ ಒಂದು ನಿಗದಿತ ಶೈಕ್ಷಣಿಕ ಚೌಕಟ್ಟನ್ನು ರೂಪಿಸಿ, ಮಗುವಿನ ಅಗತ್ಯತೆಗೆ ಅನುಗುಣವಾಗಿ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಉತ್ತಮ. ಪ್ರಯುಕ್ತ ಕೇಂದ್ರದ ಮುಖ್ಯಸ್ಥರು ಹಾಗೂ ಶಿಕ್ಷಕರು ಮಕ್ಕಳ ಸಾಮಾಜಿಕ ಹಾಗೂ ಆರ್ಥಿಕ ಹಿನ್ನಲೆಯನ್ನು ಗಮನಿಸಿ ಒಂದು ವಿವರವಾದ ಪ್ರೊಫೈಲ್- **ಮಗುವಿನ ವೈಯಕ್ತಿಕ ಶೈಕ್ಷಣಿಕ ಯೋಜನೆ** (Individual Education Plan) ನಿರ್ವಹಿಸಬೇಕು. ಮಗುವಿನ ಪ್ರೊಫೈಲ್‌ನಲ್ಲಿ ಈ ಕೆಳಗಿನ ಅಂಶಗಳು ಕಡ್ಡಾಯವಾಗಿ ಸೇರಿಸುವುದು. ಮಗುವಿನ ಪ್ರೊಫೈಲ್ ಪ್ರತಿಯನ್ನು ಕೇಂದ್ರದಲ್ಲಿ ಹಾಗೂ ಒಂದು ಪ್ರತಿಯನ್ನು ಬ್ಲಾಕ್ ಕಛೇರಿಯಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳುವುದು.

- ✓ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆ ಸಂಬಂಧ ಮಾಹಿತಿ.
- ✓ ಪ್ರಸ್ತುತ ಶೈಕ್ಷಣಿಕ ಸ್ಥಿತಿ (6 ತಿಂಗಳಿಗೊಮ್ಮೆ ಕಡ್ಡಾಯವಾಗಿ Update ಮಾಡಬೇಕು)
- ✓ ಶಾಲೆ ದಾಖಲಾಗದಿರಲು ಅಥವಾ ಬಿಡಲು ಏನು ಕಾರಣಗಳು
- ✓ ಸೇತುಬಂಧ ಕಾರ್ಯಕ್ರಮ ನಡೆಸುವ ಮುನ್ನ ನಡೆಸಿರುವ ಪೂರ್ವ ಪರೀಕ್ಷೆಯಲ್ಲಿ ಗಮನಿಸಿದ ಮಗುವಿನ ಕಲಿಕಾ ಸಾಮರ್ಥ್ಯಗಳು
- ✓ ಮಗುವಿನ ವಯಸ್ಸಿಗೆ ಹಾಗೂ ಕಲಿಕಾ ಸಾಮರ್ಥ್ಯಗಳಿಗೆ ಅನುಗುಣವಾಗಿ ಯಾವ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಸೂಕ್ತ. (ಚಟುವಟಿಕೆಗಳ ಕ್ರಿಯಾ ಯೋಜನೆ ಸಿದ್ಧ ಪಡಿಸಿ ಪ್ರಗತಿ ಸಾಧಿಸುತ್ತಿರುವ ಬಗ್ಗೆ ತಿಂಗಳಿಗೊಮ್ಮೆ ನಮೂದಿಸುವುದು)

......2/-

- ✓ ಅಗತ್ಯವಿದ್ದಲ್ಲಿ ಮಗುವಿನ ಶಿಕ್ಷಣದ ಬಗ್ಗೆ ಪೋಷಕರಿಗೆ, ಕೌನ್ಸಿಲಿಂಗ್ ನಡೆಸಿ, ಕೌನ್ಸಿಲಿಂಗ್ ಸಮಯದಲ್ಲಿ ಪೋಷಕರಿಗೆ ಇಲಾಖೆಯ ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಬಗ್ಗೆ ತಿಳಿಸಬೇಕು. ಪೋಷಕರಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣ ಒದಗಿಸುವ ಮಹತ್ವದ ಬಗ್ಗೆ ಹಾಗೂ ಈ ಕುರಿತು ತಂದೆ ತಾಯಿಗಳ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಬೇಕು.
- ✓ ಮಗುವಿಗೆ ಸಂಬಂಧಿಸಿದಂತೆ ಇನ್ನಿತರೆ ಅಗತ್ಯ ಮಾಹಿತಿ ಇದ್ದಲ್ಲಿ ನಮೂದಿಸುವುದು.

ಮೇಲಿನ ಅಂಶಗಳ ಮೂಲಕ ಮಗುವಿನ ಶೈಕ್ಷಣಿಕ ವಸ್ತುಚಿತ್ರವನ್ನು ಕೇಂದ್ರದ ಮುಖ್ಯಶಿಕ್ಷಕರು/ಶಿಕ್ಷಕರು ಸಿದ್ಧಪಡಿಸಲು ಸಂಬಂಧಿಸಿದ ಬ್ಲಾಕ್ ಹಾಗೂ ಕ್ಲಸ್ಟರ್ ಹಂತದ ಅಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡಿ, ಕೇಂದ್ರಗಳಿಗೆ ಆಗಾಗ್ಗೆ ಭೇಟಿ ನೀಡಿ ಮಾಹಿತಿಯನ್ನು Update ಆಗಿರುವುದರ ಬಗ್ಗೆ ಖಚಿತ ಪಡಿಸಿಕೊಂಡು ಮುಂದಿನ ದಿನಗಳಲ್ಲಿ ಮಗುವಿಗೆ ಹಮ್ಮಿಕೊಳ್ಳಬಹುದಾದ ಕಲಿಕಾ ಕಾರ್ಯಕ್ರಮಗಳ ಬಗ್ಗೆ ಶಿಕ್ಷಕರು ಯೋಜಿಸಿರುವ ಅಂಶಗಳು ಹಾಗೂ ಕ್ರಿಯಾಯೋಜನೆ ಪರಿಶೀಲಿಸಬೇಕು. ಮಗು ಮುಖ್ಯವಾಹಿನಿಗೆ ಸೇರಲು ಅರ್ಹತೆ ಪಡೆದ ಕೂಡಲೇ ಸೂಕ್ತ ತರಗತಿಯಲ್ಲಿ ಸೇರಿಸಿ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲ ಮಾಡಿಕೊಡುವಂತೆ ಮಗುವಿನ ಪೋಷಕರಿಗೆ ಹಾಗೂ ಸಂಬಂಧಿಸಿದ ಶಿಕ್ಷಕರು/ಮುಖ್ಯಶಿಕ್ಷಕರಿಗೆ ತಿಳಿಸಬೇಕು. ಈ ಸಂದರ್ಭದಲ್ಲಿ ಪೋಷಕರಿಗೆ ಶಿಕ್ಷಣ ಇಲಾಖಾವತಿಯಿಂದ ಸರ್ಕಾರಿ ಹಾಗೂ ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ವಿವಿಧ ಸೌಲಭ್ಯಗಳ ಬಗ್ಗೆ ತಿಳಿಸಬೇಕು.

ಪೋಷಕರ ನಿರಾಸಕ್ತಿಯಿಂದ ಶಾಲಾ ವಯಸ್ಸಿನ ಮಕ್ಕಳ ಶಿಕ್ಷಣವನ್ನು ಕುಂಠಿತವಾಗುವ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಇಲಾಖಾ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜನವಸತಿ ಪ್ರದೇಶಗಳಿಗೆ ಸ್ಥಳ ಭೇಟಿ ನೀಡಿ ಸಮುದಾಯದಲ್ಲಿ ಪ್ರಾಥಮಿಕ ಶಿಕ್ಷಣದ ಮಹತ್ವದ ಅರಿವು ಮೂಡಿಸಲು ಪ್ರಯತ್ನಿಸುವುದು. ಸಂಬಂಧಿಸಿದ ಪೋಷಕರಿಗೆ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ಮೂಲಕ ಕೌನ್ಸಿಲಿಂಗ್ ನಡೆಸಬೇಕು. ಇಂತಹ ಸಂದರ್ಭಗಳಲ್ಲಿ ಶಿಕ್ಷಣದ ಮಹತ್ವವನ್ನು ವಿವರಿಸುವ ಭಾವಚಿತ್ರಗಳು, ಯಶೋಗಾಥೆ, ಶಿಕ್ಷಣದಿಂದ ವಂಚಿತ ಮಕ್ಕಳ ಭವಿಷ್ಯ ತೋರಿಸುವ ಚಿತ್ರಗಳು, ಪತ್ರಿಕೆಗಳ ಕ್ಲಿಪ್ಪಿಂಗ್ಸ್, ಇತ್ಯಾದಿಗಳನ್ನು ಪವರ್ ಪಾಯಿಂಟ್ ಪ್ರಜೆಂಟೇಷನ್ ಮೂಲಕ ತಿಳಿಸಿ, ತಮ್ಮ ಮಕ್ಕಳನ್ನು ಶಾಲೆಗಳಿಗೆ ಸೇರಿಸುವ ಕುರಿತು ಮನವೊಲಿಸಲು ಪ್ರಯತ್ನಿಸಬೇಕು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಕ್ರಮಕ್ಕಾಗಿ

1. ರಾಜ್ಯದ ಎಲ್ಲಾ ಡಿಡಿಪಿಐ ಮತ್ತು ಡಿವೈಪಿಸಿ ಯವರಿಗೆ
2. ರಾಜ್ಯದ ಎಲ್ಲಾ ಬಿ.ಇ.ಒ/ಬಿ.ಆರ್.ಸಿ ಯವರಿಗೆ

ಮಾಹಿತಿಗೆ ಇವರಿಗೆ ಸಲ್ಲಿಸಿದೆ.

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು